1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

ಸಿ.ಸಿ.ಸಂಖ್ಯೆ:247/2024

ಪಿರ್ಯಾದಿ : ಕವಲಂದೆ ಪೊಲೀಸರು

ವಿರುದ್ಧ

ಆರೋಪಿ :
1 ಸುರೇಶ ಹೆಚ್ ಎಂ , ಬಿನ್ ಮೂರುಕಿವಿ ಮಹದೇವನಾಯಕ 39 ವರ್ಷ
2 ಮಂಜು ಹೆಚ್ ಎಂ , ಬಿನ್ ಮೂರುಕಿವಿ ಮಹದೇವನಾಯಕ , 40 ವರ್ಷ
3 ರಮೇಶ ಹೆಚ್ ಎಂ , ಬಿನ್ ಮೂರುಕಿವಿ ಮಹದೇವನಾಯಕ, 46 ವರ್ಷ
ಎಲ್ಲರ ವಾಸ: ಹೆಡತಲೆ ಗ್ರಾಮ, ನಂಜನಗೂಡು ತಾ.

## ದೋಷಾರೋಪಣೆ

ಶ್ರೀಮತಿ.ಸರಿತಾ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕ: 03.11.2023 ರಂದು ರಾತ್ರಿ 08.00 ಗಂಟೆ ಸಮಯದಲ್ಲಿ ಕವಲಂದೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಹೆಡತಲೆ ಗ್ರಾಮದ ಚಾಸಾ.1 ರವರು ಹೊಸದಾಗಿ ಕಟ್ಟುತ್ತಿರುವ ಮನೆಯ ಕೆಲಸವನ್ನು ನೋಡುತ್ತಿರುವಾಗ ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆಸ್ತಿ ವಿಚಾರದ ದ್ವೇಷಕ್ಕಾಗಿ ಏಕಾಏಕಿ ಚಾಸಾ.1 ರವರ ಮನೆಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.448 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೇಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಚಾಸಾ.1 ರವರ ಜೊತೆ ತೀಟೆ ಜಗಳ ತೆಗೆದು ಬೋಳಿ ಮಕ್ಕಳಾ ಬಡ್ಡಿ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದು

ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.504 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೇಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 1ನೇ ಆರೋಪಿತರಾದ ನೀವು ಚಾಸಾ.1ರವರ ಮುಂದಲೆಯನ್ನು ಹಿಡಿದು ಮನೆಯಿಂದ ಸಾರ್ವಜನಿಕ ರಸ್ತೆಗೆ ಎಸೆದು ತಂದು, ರವಿಕೆಯನ್ನು ಕೈಯಿಂದ ಹರಿದು ಅವರ ಮೇಲೆ ಅಪರಾಧಿಕ ಬಲಪ್ರಯೋಗ ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.354 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೇಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, 2ನೇ ಆರೋಪಿತರಾದ ನೀವು ಚಾಸಾ.1ರವರಿಗೆ ಕೈಯಿಂದ ಬೆನ್ನಿಗೆ ಹೊಡೆದಿರುತ್ತೀರಿ ಮತ್ತು 3ನೇ ಆರೋಪಿತರಾದ ನೀವು ಚಾಸಾ.1ರವರನ್ನು ಕೆಳಗೆ ತಳ್ಳಿ ನಿಮ್ಮ ಬಲಕಾಲಿನಿಂದ ಒದ್ದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.323 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಐದನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 3 ನೇ ಆರೋಪಿತರಾದ ನೀವು ಚಾಸಾ.1 ರವರ ಮನೆಯ ಮೇಲೆ ಹೋಗಿ ಹೊಸ ಮನೆ ಕೆಲಸಕ್ಕಾಗಿ ತಂದಿದ್ದ ಪ್ಲಾಸ್ಟಿಕ್ ಪೈಪನಲ್ಲಿ ನೀರಿನ ಪೈಪ್ ಇಟ್ಟಿಗೆಗಳನ್ನು ಹೊಡೆದು ಹಾಕಿ ಚಾಸಾ.1 ರವರಿಗೆ ನಷ್ಟವನ್ನುಂಟು ಮಾಡಿರುತ್ತೀರಿ . ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.427 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆ ಪೈಕಿ 2 ನೇ ಆರೋಪಿತರಾದ ನೀವು ಚಾಸಾ.1 ರವರಿಗೆ ನಿಮ್ಮ ಗಂಡ ನಾವು ಹಾಕಿರುವ ಸಿವಿಲ್ ಕೇಸನ್ನು ರಾಜಿ ಮಾಡಿಕೊಳ್ಳದೆ ನಮಗೆ ತೊಂದರೆ ಕೊಡುತ್ತಿದ್ದಾನೆ ನಿಮ್ಮನ್ನು ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಎಸಗಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 18.06.2025 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

**ಸಿ.ಸಿ.ಸಂಖ್ಯೆ:247/2024**

**ಪಿರ್ಯಾದಿ** : ಕವಲಂದೆ ಪೊಲೀಸರು

**ವಿರುದ್ಧ**

**ಆರೋಪಿ** :
1 ಸುರೇಶ ಹೆಚ್ ಎಂ , ಬಿನ್ ಮೂರುಕಿವಿ ಮಹದೇವನಾಯಕ 39 ವರ್ಷ
2 ಮಂಜು ಹೆಚ್ ಎಂ , ಬಿನ್ ಮೂರುಕಿವಿ ಮಹದೇವನಾಯಕ , 40 ವರ್ಷ
3 ರಮೇಶ ಹೆಚ್ ಎಂ , ಬಿನ್ ಮೂರುಕಿವಿ ಮಹದೇವನಾಯಕ, 46 ವರ್ಷ
ಎಲ್ಲರ ವಾಸಃ ಹೆಡತಲೆ ಗ್ರಾಮ, ನಂಜನಗೂಡು ತಾ.

: ಆಪಾದನೆ :

ಪ್ರಶ್ನೆ-1 : ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ ?
ಉತ್ತರ :

ಪ್ರಶ್ನೆ-2 : ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?
ಉತ್ತರ :

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
**ನಂಜನಗೂಡು**